ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (269)260
ಮಾನ್ಯ ಸದಸ್ಯರ ಹೆಸರು : ಶ್ರೀ. ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು)
ಉತ್ತರಿಸುವ ಸಚಿವರು : (ಶ್ರೀ.ಸಿ.ಎಂ.ಉದಾಸಿ)
: ಮಾನ್ಯ ಲೋಕೋಪಯೋಗಿ ಸಚಿವರು

ಅ) ಶಿರಾದಿಂದ ಮುಳಬಾಗಿಲನವರೆಗೆ ಕೇಶಿಪ್ ಎರಡನೇ ಹಂತದಲ್ಲಿ ರಸ್ತೆಯ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಿದ್ದು ಮಂಜೂರಾತಿಯ ಹಂತದಲ್ಲಿರುವುದು ನಿಜವಲ್ಲವೇ;

ಸಿರಾದಿಂದ ಮಧುಗಿರಿ–ಗೌರಿಬಿದನೂರು–ಚಿಕ್ಕಬಳ್ಳಾಪುರ–ಚಿಂತಾಮಣಿ–ಶ್ರೀನಿವಾಸಪುರ ರಾಷ್ಟ್ರೀಯ ಹೆದ್ದಾರಿ–4 ಆಂಧ್ರಪ್ರದೇಶ ಗಡಿವರೆಗಿನ **210** ಕಿಮೀ.ಗಳ ರಾಜ್ಯ ಹೆದ್ದಾರಿ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಕೆಶಿಪ್–2ರ ಯೋಜನೆಯಡಿಯಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

ಆ) ಈ ರಸ್ತೆಯನ್ನು ಕೈಬಿಟ್ಟು ಈ ಯೋಜನೆ ಬೇರೆ ಕಡೆಗೆ ವರ್ಗಾಯಿಸುತ್ತಿರುವುದು ನಿಜವೇ;

ಇಲ್ಲ.

ಇ) ಹಾಗಿಲ್ಲದಿದ್ದಲ್ಲಿ, ಈ ರಸ್ತೆಯ ಅಭಿವೃದ್ಧಿಯನ್ನು ಎಂದಿನಿಂದ ಕೈಗೆತ್ತಿಕೊಂಡು ಕೆಲಸ ಪ್ರಾರಂಭಿಸಲಾಗುವುದು

ಮೇಲೆ ತಿಳಿಸಿರುವ ಒಟ್ಟು **210** ಕಿಮೀ.ಗಳ ರಸ್ತೆಯಲ್ಲಿ ಸಿರಾದಿಂದ ಮಧುಗಿರಿ–ಗೌರಿಬಿದನೂರು–ಚಿಕ್ಕಬಳ್ಳಾಪುರವರೆಗಿನ **108** ಕಿಮೀ.ಗಳ ರಸ್ತೆ ಅಭಿವೃದ್ಧಿಯನ್ನು ಕೇಶಿಪ್–2ನೇ ಹಂತದಲ್ಲಿ ಏಷ್ಯ ಅಭಿವೃದ್ಧಿ ಬ್ಯಾಂಕ್‌ನ ಆರ್ಥಿಕ ನೆರವಿನೊಂದಿಗೆ ಕೈಗೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿದೆ. ಈ ಸಂಬಂಧ ಬ್ಯಾಂಕ್‌ನೊಂದಿಗೆ ಮುಂದಿನ ಪ್ರಕ್ರಿಯೆಗಳನ್ನು ಕೈಗೊಳ್ಳಬೇಕಾಗಿದೆ. ಇದಲ್ಲದೆ ಇನ್ನುಳಿದ ಚಿಕ್ಕಬಳ್ಳಾಪುರ–ಚಿಂತಾಮಣಿ–ಶ್ರೀನಿವಾಸಪುರ ರಾಷ್ಟ್ರೀಯ ಹೆದ್ದಾರಿ–4 ಆಂಧ್ರಪ್ರದೇಶ ಗಡಿವರೆಗಿನ **102** ಕಿಮೀ. ಗಳನ್ನು ಸದರಿ ಯೋಜನೆಯ ಮುಂದಿನ ಹಂತಗಳಲ್ಲಿ ಇತರೆ ಹಣಕಾಸು ಸಂಸ್ಥೆಗಳ ಆರ್ಥಿಕ ನೆರವಿನ ಮೂಲಕ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ. ಸದರಿ ರಸ್ತೆಯ ವಿವರವಾದ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದ್ದು, ಅಭಿವೃದ್ಧಿಗೆ ಆರ್ಥಿಕ ನೆರವು ಒದಗಿ ಬಂದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಈ) ಈ ರಸ್ತೆಯ ಅಭಿವೃದ್ಧಿಗೆ ಅಂದಾಜು ಮಾಡಿರುವ ಮೊತ್ತವೆಷ್ಟು (ವಿವರ ನೀಡುವುದು)

ಸದರಿ ರಸ್ತೆಯನ್ನು ಅಭಿವೃದ್ಧಿಗೊಳಿಸಲು ವಿವರವಾದ ಅಂದಾಜು ಪಟ್ಟಿಗಳನ್ನು ಇನ್ನೂ ಸಿದ್ಧಪಡಿಸಬೇಕಾಗಿದೆ.

ಉ) ಕೇಂದ್ರ ಸರ್ಕಾರದಿಂದ ಅನುಮತಿ ಪಡೆದು ಎಂದಿನಿಂದ ಕೆಲಸ ಪ್ರಾರಂಭಿಸಲಾಗುವುದು?

ಕೆಶಿಪ್–2 ಯೋಜನೆಯಲ್ಲಿ ಒಟ್ಟು 3411 ಕಿಮೀ.ಗಳ ರಾಜ್ಯ ಹೆದ್ದಾರಿ ಅಭಿವೃದ್ಧಿಯನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಮೊದಲ ಹಂತದಲ್ಲಿ 584 ಕಿಮೀ. ರಸ್ತೆ ಅಭಿವೃದ್ಧಿಗೆ ವಿಶ್ವಬ್ಯಾಂಕ್ ನೆರವು ಪಡೆದುಕೊಳ್ಳಲು ಕೇಂದ್ರ ಸರ್ಕಾರದ ಅನುಮತಿ ದೊರೆತಿದೆ. ಎರಡನೇ ಹಂತದ 863 ಕಿಮೀ.ಗಳ ರಸ್ತೆ ಅಭಿವೃದ್ಧಿಗೆ ಏಷ್ಯ ಅಭಿವೃದ್ಧಿ ಬ್ಯಾಂಕ್‌ನಿಂದ ನೆರವು ಪಡೆದುಕೊಳ್ಳಲು ರಾಜ್ಯ ಸರ್ಕಾರದ ಅನುಮೋದನೆ ದೊರೆತಿದೆ. ಇನ್ನುಳಿದಂತೆ 1964 ಕಿಮೀ.ಗಳ ರಸ್ತೆ ಅಭಿವೃದ್ಧಿಗೆ ಇತರೆ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಪಡೆದುಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಸದರಿ ಸಂಸ್ಥೆಗಳಿಂದ ಆರ್ಥಿಕ ನೆರವು ಒದಗಿ ಬಂದ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (444)261
ಮಾನ್ಯ ಸದಸ್ಯರ ಹೆಸರು : ಶ್ರೀ. ಸಿದ್ದು ಸವದಿ (ತೇರದಾಳ್)
ಉತ್ತರಿಸುವ ಸಚಿವರು : (ಶ್ರೀ.ಸಿ.ಎಂ.ಉದಾಸಿ)
: ಮಾನ್ಯ ಲೋಕೋಪಯೋಗಿ ಸಚಿವರು

ಅ) ಜಮಖಂಡಿ–ತೇರದಾಳ–ಕುಡಚಿ ರಸ್ತೆಯು ಜಮಖಂಡಿ ತಾಲ್ಲೂಕಿನ ಮತ್ತು ಬಾಗಲಕೋಟೆ ಜಿಲ್ಲೆಯ ಪ್ರಮುಖ ರಾಜ್ಯ ಹೆದ್ದಾರಿಯನ್ನು 2008–09ನೇ ಕೆಶಿಪ್ ಯೋಜನೆಯಲ್ಲಿ ತೆಗೆದುಕೊಳ್ಳಲಾಗುವುದೇ;

ಜಮಖಂಡಿಯಿಂದ ಆಸಂಗಿ–ತೇರದಾಳ–ಕುಡಚಿ–ಮಂಗಸೂಳಿ–ಮಹಾರಾಷ್ಟ್ರ ಗಡಿವರೆಗಿನ 78.5 ಕಿಮೀ. ಉದ್ದದ ರಾಜ್ಯ ಹೆದ್ದಾರಿಯನ್ನು ಉನ್ನತೀಕರಿಸುವ ಕಾಮಗಾರಿಯನ್ನು ಕೆಶಿಪ್–II ಯೋಜನೆಯಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಹಣಕಾಸು ಸಂಸ್ಥೆಗಳಿಂದ ಸೂಕ್ತ ಆರ್ಥಿಕ ನೆರವು ಒದಗಿ ಬಂದ ನಂತರ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಆ) 2008–09ರಲ್ಲಿ ಈ ಯೋಜನೆಯಲ್ಲಿ ಅಭಿವೃದ್ಧಿ ಪಡಿಸಲಿರುವ ರಾಜ್ಯ ರಸ್ತೆಗಳು ಯಾವುವು (ಸಂಪೂರ್ಣ ವಿವರ ಒದಗಿಸುವುದು);

2008–09 ರಲ್ಲಿ ಕೆಶಿಪ್–II ಯೋಜನೆಯ ಹಂತ–1 ರಲ್ಲಿ 584 ಕಿಮೀ.ಗಳ ರಾಜ್ಯ ಹೆದ್ದಾರಿಯನ್ನು ವಿಶ್ವಬ್ಯಾಂಕ್ ನೆರವಿನೊಂದಿಗೆ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ರಸ್ತೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕೆಶಿಪ್ ರಸ್ತೆಗಳ ಅಭಿವೃದ್ಧಿ ಯೋಜನೆಯಲ್ಲಿ ತಾರತಮ್ಯವೆಸಗಿ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿರುವುದು ನಿಜವೇ?

ಕೆಶಿಪ್ ರಸ್ತೆಗಳ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳಬಹುದಾದ ರಸ್ತೆಗಳ ಕಾರ್ಯತಂತ್ರ ಆಯ್ಕೆ ಅಧ್ಯಯನ (Strategic Option Study) ಮತ್ತು